# ರಾಜನು ಬರುತ್ತಿದ್ದಾನೆ!

## ಅಪೊಸ್ತಲರ ಕೃತ್ಯಗಳು 1:10, 11, ಒಂದು ನಿಕಟ ನೋಟ

"ರಾಜನು ಬರುತ್ತಿದ್ದಾನೆ!" ಎನ್ನುವ ಪ್ರಸ್ತಾಪವು ಹಳೇ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಯ ಉದ್ದಕ್ಕೂ ಪ್ರತಿಧ್ವನಿಸುತ್ತದೆ. ಹಳೆ ಒಡಂಬಡಿಕೆಯಲ್ಲಿ. "ರಾಜನು ಬರುತ್ತಿದ್ದಾನೆ!" ಎಂಬ ಆಲೋಚನೆಯಿದೆ. ಸುವಾರ್ತೆಯಲ್ಲಿ, "ರಾಜನು ಇಲ್ಲಿದ್ದಾನೆ!" ಎಂಬ ಸಂದೇಶವಿದೆ. ಹೊಸ ಒಡಂಬಡಿಕೆಯ ಉಳಿದೆಲ್ಲ ಭಾಗವು, "ರಾಜನು ತಿರುಗಿ ಬರುತ್ತಾನೆ ಎಂದು ಪ್ರಸ್ತಾಪಿಸುತ್ತದೆ!"[1]

### ಹಳೆ ಒಡಂಬಡಿಕೆಯಲ್ಲಿ: "ರಾಜನು ಬರುತ್ತಿದ್ದಾನೆ!"

**ನಿರೀಕ್ಷಣೆ ಕೆರಳಿತು**

ಹಳೆ ಒಡಂಬಡಿಕೆಯಲ್ಲಿ, ಮಾನವನು ಪಾಪ ಮಾಡಿದ ಮೇಲೆ ದೇವರು ರಕ್ಷಕನು ಬರುತ್ತಾನೆ ಎಂದು ಅನೇಕ ವಾಗ್ದಾನಗಳನ್ನು ಹೇಳಿದ್ದಾನೆ. "ಹಳೆ ಒಡಂಬಡಿಕೆಯಲ್ಲಿ ಸುಮಾರು 380 ಸಾರಿ ಕ್ರಿಸ್ತನು ... ಮನುಷ್ಯರನ್ನು ರಕ್ಷಿಸುವದಕ್ಕಾಗಿ ಬರುತ್ತಾನೆ ಎಂದು ಬರೆಯಲ್ಪಟ್ಟಿದೆ."[2] ಮೊದಲನೆಯ ವಾಗ್ದಾನ *ಸಂತಾನದ* ವಾಗ್ದಾನ (ಉದಾಹರಣೆಗೆ ಆದಿಕಾಂಡ 3:15; 22:18). ಕೊನೆಗೆ, ಹೇಗಿದ್ದರೂ, ಇಸ್ರಾಯೇಲ್ಯರ ಜನಾಂಗದ ಮುಖಾಂತರ ರಕ್ಷಕನು ಬರುವದನ್ನು ದೇವರು ಹೆಸರಿಸಿದ್ದಾನೆ. ದೇಶವನ್ನು ಆಳಲು ರಾಜನನ್ನು ಒಂದು ಸಾರಿ ನೇಮಿಸಿದ ನಂತರ ಆ ವಾಗ್ದಾನಗಳು *ರಾಜ್ಯದಾನಿಯ* ವಾಗ್ದಾನಗಳಾಗುತ್ತಿದ್ದವು.

ಉದಾಹರಣೆಗೆ, ಶ್ರೇಷ್ಟ ರಾಜನಾಗಿ ಬರುವದನ್ನು ಕೀರ್ತನೆ 2 ಸೂಚಿಸುತ್ತದೆಂದು ಯೆಹೂದ್ಯರು ಆಲೋಚಿಸಿದರು.[3] ವಚನ 2ರಲ್ಲಿ, "ಯೆಹೋವನಿಗೂ ಆತನು ಅಭಿಷೇಕಿಸಿದವನಿಗೂ ವಿರೋಧವಾಗಿ ಭೂಪತಿಗಳು ಸನ್ನದ್ಧರಾಗಿ ನಿಂತಿದ್ದಾರೆ" ಎಂದು ಓದುತ್ತೇವೆ. ಇಬ್ರಿಯ ಭಾಷೆಯಲ್ಲಿ "ಅಭಿಷೇಕಿಸು" ಎನ್ನುವುದಕ್ಕೆ "ಮೆಸ್ಸೀಯಾ"; ಎಂದು ಭಾಷಾಂತರಿಸಲಾಗಿದೆ. ಅದನ್ನು ಗ್ರೀಕ್ ಭಾಷೆಯಲ್ಲಿ "ಕ್ರಿಸ್ತನು" ಎನ್ನುವದಕ್ಕೆ ಸಮವಾಗಿದೆ. ಅನೇಕ ಆತ್ಮೀಕ ಅಧಿಕಾರಿಗಳು ಎಣ್ಣೆಯಿಂದ ಅಭಿಷೇಕ ಹೊಂದಿದರು.[4] ಆದರೆ "ಆಭಿಷೇ ಕಿಸು" ಎಂದು ಹೆಚ್ಚಿನ ಯೆಹೂದ್ಯರು ಕೇಳಿದಾಗ ಒಬ್ಬ *ರಾಜನನ್ನು* ಆಲೋಚಿಸುವರು. ಪ್ರಥಮ ಅರಸನಾದ ಸೌಲನು, "ದೇವರಿಂದ ಅಭಿಷೇಕಿಸಿದವನು" ಎಂದು ಕರೆಯಲ್ಪಟ್ಟನು (1 ಸಮುವೇಲ 24:6, 10; 26:9, 11, 16, 23). ಕೀರ್ತನೆ 2ರಲ್ಲಿ, ಅಭಿಷೇಕ ಹೊಂದಿದವರ ಬಗ್ಗೆ, ದೇವರು ಹೀಗೆ ಹೇಳುತ್ತಾರೆ, "ನನಗೆ ನೀನು ಮಗನು, ನಾನೇ ಈ ಹೊತ್ತು ನಿನ್ನನ್ನು ಪಡೆದಿದ್ದೇನೆ" (ವಚನ 7). ಒಬ್ಬ ರಾಜನು ಬರತ್ತಿದ್ದಾನೆ!

ಪುನಃ, ದಾನಿಯೇಲ 2:44ರಲ್ಲಿ, ಈ ವಾಗ್ದಾನವನ್ನು ಕಾಣುತ್ತೇವೆ: "ರಾಜರ ಕಾಲದಲ್ಲಿ [ರೋಮ್ ಸಾಮ್ರಾಜ್ಯ ಆಳುತ್ತಿರುವಾಗ] ಪರಲೋಕ ದೇವರು ಒಂದು ರಾಜ್ಯವನ್ನು ಸ್ಥಾಪಿಸುವನು ಅದು ಎಂದಿಗೂ ಅಳಿಯದು." ಈ ರೀತಿಯ ಮತ್ತು ಇತರೆ ವಾಗ್ದಾಗಳು ಇಸ್ರಾಯೇಲ್ಯರ ಕಷ್ಟದ ದಿನಗಳಲ್ಲಿ ಅಂದರೆ ಕತ್ತಲು ಮತ್ತು ಬೆಳಕಿನ ದಿನಗಳಲ್ಲಿ ಅವರಿಗೆ ಆಧಾರವಾಗಿದ್ದವು. ರಾಜನು ತನ್ನ ರಾಜ್ಯವನ್ನು ಸ್ಥಿರಪಡಿಸಲು ಬರುತ್ತಿದ್ದಾನೆ!

### ನಿರೀಕ್ಷೆ ಬಾಡಿಹೋಗುತಿತ್ತು

ದಿನಗಳು ಗತಿಸಿಹೋದಂತೆ ರಾಜನು ಪ್ರತ್ಯಕ್ಷನಾಗಲಿಲ್ಲ ಇಸ್ರಾಯೇಲ್ಯರ ಪೂರ್ವ ನಿರೀಕ್ಷೆ ಕಡಿಮೆಯಾಯಿತು. ಕ್ರಿಸ್ತನು ಬರುವ ಸಮಯಕ್ಕೆ ಅವರ ಪರಿಸ್ಥಿತಿಗಳು ಹೇಗಿದ್ದವೆಂಬುದನ್ನು Landon Saundersರವರು ಹೀಗೆ ವಿವರಿಸಿದ್ದಾರೆ:

> ಡಂಬಾಚಾರ ಮತ್ತು ರೋಮನ್ನವರ ಬಲವು ಎಲ್ಲಾ ಕಡೆ ಪ್ರತ್ಯಕ್ಷವಾಗಿತ್ತು. ಪ್ರಾತಿನಿದ್ಯ ಹೊಂದಿದ ಸೇನೆಗಳು ಬೀದಿಗಳಲ್ಲಿ ತಿರುಗಾಡುತ್ತಿದ್ದವು, ಅವರು ಬೆಟ್ಟಗಳನ್ನು ಗಸ್ತು ತಿರುಗುತ್ತಾ, ಪರಿಶುದ್ಧ ಪಟ್ಟಣವನ್ನು ಲೆಕ್ಕಿಸದೇ, ವಾಗ್ದಾನ ಮಾಡಿದ ದೇಶವು ಅನ್ಯರ ಅಧಿಕಾರಕ್ಕೊಳಗಾಗಿ ದಾಸತ್ವದಲ್ಲಿದೆ ಎಂದು ಸ್ಥಿರವಾದ, ಸಿಟ್ಟಿಗೆಬ್ಬಿಸುವ ಜ್ಞಾಪಕವನ್ನು ಕೊಡುತ್ತದೆ.[5]

ಕ್ರಮೇಣವಾಗಿ, ದೇಶದ ಆಸಕ್ತಿ ಭೂಲೋಕದ ವಿಷಯಕ್ಕೆ ತಿರುಗಿತು - ಕೆಲವರು ನಾವು ಭಕ್ತಿಯುಳ್ಳವರು ಎಂದು ಹೇಳಿಕೊಳ್ಳುವವರಲ್ಲಿಯೂ ಸಹ. ನಿರೀಕ್ಷೆಯ ಕಿಡಿ ಕೆಲವರ ಹೃದಯಗಳಲ್ಲಿ ಕಡಿಮೆಯಾಗುತ್ತಾ ಉರಿಯಿತು.

ಆದಾಗ್ಯೂ, ಇತರರಲ್ಲಿ ಇದು ಪ್ರಕಾಶವಾಗಿ ಹೊಳೆಯಿತು, ಉದಾಹರಣೆಯಾಗಿ, ಯಾವಾಗ ಮರಿಯಳು ಮತ್ತು ಯೋಸೇಫನು ಯೇಸುವನ್ನು ದೇವಾಲಯಕ್ಕೆ ತೆಗೆದುಕೊಂಡು ಹೋದರೋ, "ಇಸ್ರಾಯೇಲ್ಯರ ಸಮಾಧಾನಕ್ಕೋಸ್ಕರ" (ಲೂಕ 2:25) ಅಲ್ಲಿ ವೃದ್ದನಾಗಿರುವ ಸಿಮಿಯೋನ ಅನೇಕ ವರ್ಷಗಳಿಂದ ಕಾಯುತ್ತಿದ್ದನು - ಕೇವಲ ರಾಜನು ಮಾತ್ರವೇ ಸಮಾಧಾನವನ್ನು ಕೊಡಬಲ್ಲನು. "ಒಡೆಯನೇ, ನಿನ್ನ ಮಾತು ನೆರವೇರಿತು. ಈಗ ಸಮಾಧಾನದಿಂದ ಹೋಗುವದಕ್ಕೆ ನಿನ್ನ ದಾಸನಿಗೆ ಅಪ್ಪಣೆಯಾಯಿತು. ನಾನು ನೇಮಿಸಿರುವ ರಕ್ಷಕನನ್ನು ನಾನು ಕಣ್ಣಾರೆ ಕಂಡೆನು" (ಲೂಕ 2:29, 30) ಎಂದು ಮಗುವಾದ ಯೇಸುವನ್ನು ತನ್ನ ಕೈಯಲ್ಲಿ ತಕ್ಕೊಂಡು ದೇವರನ್ನು ಕೊಂಡಾಡಿದನು. ಕೆಲವು ಸಾರಿ ಬೆಂಕಿಯು ನೆನಸದ ದಿಕ್ಕುಗಳಿಂದ ಉರಿಯಿತು. ಯಾವಾಗ ಯೇಸು ಅನೀತಿವಂತಳಾದ ಸಮಾರ್ಯದವಳು ಬಾವಿಯ ಹತ್ತಿರ ಮಾತಾಡಿದನೋ ಆಕೆ ಹೀಗೆ ಹೇಳಿದಳು, "ಮೆಸ್ಸೀಯನು ಬರುತ್ತಾನೆಂದು ಬಲ್ಲೆನು ಮೆಸ್ಸೀಯನು ಅಂದರೆ (ಕ್ರಿಸ್ತನು); ಆತನು ಬಂದ ಮೇಲೆ ನಮಗೆ ಎಲ್ಲಾ ತಿಳಿಸುವನು" (ಯೋಹಾನ 4:25).

## ಸುವಾರ್ತೆಗಳಲ್ಲಿ: "ರಾಜನು ಇಲ್ಲಿದ್ದಾನೆ!"

### ನಿರೀಕ್ಷೆಯ ಜ್ವಾಲೆ ಉರಿಯುತ್ತಿರುವದು

ನಂತರ, ಹೇಗೋ, ಒಂದು ರೀತಿಯಲ್ಲಿ ಇಸ್ರಾಯೇಲರ ನಂಬಿಕೆಯ ಜ್ವಾಲೆಯು ಪುನಃ ಉರಿಯಲು ಮತ್ತು ಅದಕ್ಕೆ ಗಾಳಿಯನ್ನು ಬೀಸಿ ಮತ್ತಷ್ಟು ಉರಿಯುವಂತೆ ಮಾಡಲಾಯಿತು. ಯೋಹಾನನೆಂಬ ಒಬ್ಬ ಮನುಷ್ಯನು ಯೂದಾಯ ಅರಣ್ಯದಲ್ಲಿ ಸಾರಲು ಪ್ರಾರಂಭಿಸಿದನು: "ದೇವರ ಕಡೆಗೆ ತಿರುಗಿಕೊಳ್ಳಿರಿ ದೇವರ ರಾಜ್ಯ ಹತ್ತಿರವಾಯಿತು" (ಮತ್ತಾಯ 3:2). ಬೇರೆ ರೀತಿಯಲ್ಲಿ ಹೇಳುವುದಾದರೆ, "ರಾಜನು ಬರುತ್ತಿದ್ದಾನೆ - ಮತ್ತು ನೀವು ಸಿದ್ಧವಾಗುವದು ಅವಶ್ಯವಾಗಿದೆ!" ಜನರ ಗುಂಪು ಯೋಹಾನನಿಗೆ, "ಹಾಗಾದರೆ ನಾವೇನು ಮಾಡಬೇಕು?" (ಲೂಕ 3:10) ಎಂದು ಕೇಳಿದರು. ಅದಕ್ಕೆ ಅವನು "ಎರಡು ಅಂಗಿಗಳುಳ್ಳವನು ಇಲ್ಲದವನಿಗೆ ಒಂದನ್ನು ಕೊಡಲಿ ಆಹಾರವುಳ್ಳವನು ಇಲ್ಲದವನಿಗೆ ಕೊಡಲಿ" (ಲೂಕ 3:11). ಸುಂಕದವರಿಗೆ ಹೀಗೆ ಹೇಳಿದನು. "ನೇಮಿಸಿದ ಹಸಲಿಗಿಂತ ಹೆಚ್ಚಾಗಿ ಏನು ಎಳಕೊಳ್ಳಬೇಡಿರಿ" (ಲೂಕ 3:13). ಆತನು ಸೈನಿಕರಿಗೆ, "ಯಾರನ್ನಾದರೂ ಬೆದರಿಸಬೇಡಿರಿ ಯಾರ ಮೇಲಾದರೂ ಸುಳ್ಳುದೂರು ತಂದು ದುಡ್ಡು ಕಸಕೊಳ್ಳಬೇಡಿರಿ ನಿಮ್ಮ ಸಂಬಳದಲ್ಲಿ ತೃಪ್ತರಾಗಿರಿ ಎಂದು

ಹೇಳಿದನು" (ಲೂಕ 3:14). ರಾಜನು ಬರುವ ನಿರೀಕ್ಷೆಯು ಯೋಹಾನನ ಗುಂಪಿನವರ ಜೀವನದ ಮೇಲೆ ಪರಿಣಾಮ ಬೀರಿತು!

ಬಹಳ ವರ್ಷಗಳಿಂದ ಕಾಯುತ್ತಿರುವ ರಾಜ ಯೇಸು ಆಗಿದ್ದನು (ಮತ್ತಾಯ 2:2; ಯೋಹಾನ 1:49). ಆತನು ಬಂದಾಗ, ಆದಾಗ್ಯೂ, ಅರಮನೆಯಲ್ಲಿ ಹುಟ್ಟಲಿಲ್ಲ, ಆತನು ರಾಜ ಮರ್ಯಾದೆಯ ವಸ್ತ್ರಗಳು ಧರಿಸಿರಲಿಲ್ಲ, ಮತ್ತು ಬಲಿಷ್ಟ ಸೇನೆಯನ್ನು ಕರೆಯಲಿಲ್ಲ,[6] ರಾಜ್ಯ ಸ್ಥಾಪನೆಯ ಕುರಿತು ಸ್ಥಿರವಾಗಿ ಮನಸ್ಸಿನಲ್ಲಿ ಮತ್ತು ಮಾತುಗಳಲ್ಲಿದ್ದ ರಾಜ್ಯವನ್ನು ಸ್ಥಾಪಿಸುವ ರಾಜನೆಂದು ಹೇಳುವುದಕ್ಕೆ ಈ ಎಲ್ಲಾ ಸಂಗತಿಗಳು ಅನೇಕರಿಗೆ ಸಂಶಯ ಉಂಟುಮಾಡಿತು. ಯೋಹಾನನು, "ಪರಲೋಕ ರಾಜ್ಯ ಸಮೀಪಿಸಿತು, ದೇವರ ಕಡೆ ತಿರುಗಿಕೊಳ್ಳಿರಿ" (ಮತ್ತಾಯ 4:17) ಎಂದು ಪ್ರಕಟಿಸಿದರು. ಆತನ ಅನೇಕ ದೃಷ್ಟಾಂತಗಳು, "ಪರಲೋಕ ರಾಜ್ಯ ಈ ರೀತಿ ಯಲ್ಲಿದೆ" ಎನ್ನುವ ಮಾತಿನಿಂದ ಪ್ರಾರಂಭಿಸಿದ್ದಾನೆ (ಮತ್ತಾಯ 13:31, 33, 44, 45, 47, 52; 20:1). "ಪರಲೋಕದ ಬೀಗದ ಕೈಗಳನ್ನು" (ಮತ್ತಾಯ 16:19) ಪೇತ್ರನಿಗೆ ವಾಗ್ದಾನ ಮಾಡಿದನು. ಆತನು ತನ್ನ ಅಪೊಸ್ತಲರಿಗೆ ಅವರು ಜೀವಿಸಿರುವಾಗಲೇ ದೇವರ ರಾಜ್ಯದ "ಬಲದೊಂದಿಗೆ" ಬರುವದನ್ನು ಕಾಣುವರು ಎಂದು ಹೇಳಿದನು (ಮಾರ್ಕ 9:1).

**ನಿರೀಕ್ಷೆ ಬಾಡಿಹೋಗುತಿತ್ತು**

ಆಕಸ್ಮಿವಾಗಿ, ಜನರು ರಾಜ ಮತ್ತು ಆತನ ರಾಜ್ಯದ ಕುರಿತು ತಪ್ಪಾದ ಕಲ್ಪನೆಯನ್ನು ಹೊಂದಿದ್ದರು ಅವರು ಭೂಲೋಕದ ರಾಜನು ಬಂದು ಅವರ ವೈರಿಗಳನ್ನು ಸೋಲಿ ಸುತ್ತಾನೆಂದು ನೋಡುತ್ತಿದ್ದರು. ಒಂದು ದಿನ ಜನರು ಆತನನ್ನು ರಾಜನನ್ನಾಗಿ ಮಾಡಿ ಕಿರೀಟವನ್ನು ಧರಿಸಲು ಪ್ರಯತ್ನಿಸಿದರು ಆದರೆ, ಹಾಗೆ ಮಾಡಲು ಅವರಿಗೆ ಯೇಸು ಅನುಮತಿಕೊಟ್ಟಿಲ್ಲ (ಯೋಹಾನ 6:15). ನಂತರ, ಭಾನುವಾರದಂದು, ಜನರು "... - ಜಯ ಕರ್ತನ ಹೆಸರಿನಲ್ಲಿ ಬರುವವನಿಗೆ ಆಶೀರ್ವಾದ; ನಮ್ಮ ಪಿತೃವಾದ ದಾವೀದನ ರಾಜ್ಯವು ಬರುತ್ತದೆ ಅದಕ್ಕೆ ಆಶೀರ್ವಾದ; ... !" (ಮಾರ್ಕ 11:9, 10) ಎಂದು ಆರ್ಭಟಿಸಿದಾಗ ಕ್ರಿಸ್ತನು ಯೆರೂಸಲೇಮಿಗೆ ಒಂದು ಕತ್ತೆಯ ಮರಿಯ ಮೇಲೆ ಹತ್ತಿ ಹೋದನು. ಅವರು ಸ್ಪಷ್ಟವಾಗಿ ಯೇಸು ರಾಜ್ಯವನ್ನು ಆಗಲೇ ಅಲ್ಲಿಯೇ ಸ್ಥಾಪಿಸುತ್ತಾನೆ ಎಂದು ನಿರೀಕ್ಷಿಸಿದರು - ಆದರೆ ಅವರಿಗೆ ನಿರಾಶೆಯುಂಟಾಯಿತು.

ಕೆಲವರು ಯೇಸುವಿನ ಹೇಳಿಕೆಗಳಿಂದ ಜನರು ಈತನು ಈ ಲೋಕದ ರಾಜನಲ್ಲ ಎನ್ನುವದನ್ನು ಗ್ರಹಿಸಿಕೊಂಡರು. ಆತನು ಹೀಗೆ ಹೇಳಿದನು. "ನನ್ನ ರಾಜ್ಯವು ಈ ಲೋಕದದಲ್ಲ" (ಯೋಹಾನ 18:36ಎ). ಆತನು ಶಿಲುಬೆಯ ಮರಣ ಹೊಂದಿ ಸಾಯುತ್ತಾನೆಂದು ಹೇಳಿದನು (ನೋಡಿರಿ ಮತ್ತಾಯ 16:21; 17:23; 20:19) - ಆತನು ರಾಜನಲ್ಲದವನಾಗೆ ಅಂತಿಮವಾದನು! ಆತನು ಈ ಲೋಕವನ್ನು *ಬಿಟ್ಟು* ಹೋಗುತ್ತೇನೆಂದು ಹೇಳಿದನು (ನೋಡಿ ಯೋಹಾನ 16:28).

ಹಾಗಿದ್ದರೂ, ಆತನು *ತಿರುಗಿ ಬರುವದರ*[7] ಕುರಿತು ಮಾತಾಡಿದನು. ಇಲ್ಲಿ ಇದು ಸಂದೇಶದ ಮುಖಾಂಶವಾಗಿದೆ. ಮತ್ತಾಯ 24 ಮತ್ತು 25ರಲ್ಲಿನ ದೀರ್ಘವಾದ ಚರ್ಚೆಯಲ್ಲಿ ಈ ಮಾತುಗಳು ನಾವು ಕಾಣುತ್ತೇವೆ:

> ನೋಹನ ದಿವಸಗಳು ಹೇಗಿದ್ದವೋ *ಹಾಗೆಯೇ ಮನುಷ್ಯ ಕುಮಾರನ ಪ್ರತ್ಯಕ್ಷತೆಯೂ ಇರುವದು.* ಹೇಗೆಂದರೆ ಜಲಪ್ರಳಯಕ್ಕೆ ಮುಂಚಿನ ದಿನಗಳಲ್ಲಿ ನೋಹನು ನಾವೆಯಲ್ಲಿ ಸೇರಿದ ದಿನದ ತನಕ ಜನರು ಉಣ್ಣುತ್ತಾ ಕುಡಿಯುತ್ತಾ ಮದುವೆ ಮಾಡಿಕೊಳ್ಳುತ್ತಾ ಮಾಡಿಕೊಡುತ್ತಾ ಇದ್ದು ಪ್ರಳಯದ ನೀರು *ಬಂದು* ಎಲ್ಲರನ್ನು ಬಡುಕೊಂಡು ಹೋಗುವ ತನಕ ಏನೂ ತಿಳಿಯದೆ ಇದ್ದರಲ್ಲಾ. ಅದರಂತೆ ಮನುಷ್ಯ ಕುಮಾರನು ಪ್ರತ್ಯಕ್ಷನಾಗುವ

ಕಾಲದಲ್ಲಿಯೂ ಇರುವದು (ಮತ್ತಾಯ 24:37-39; ಒತ್ತಿ ಹೇಳಿದ್ದು ನನ್ನದು).

> "ಮನುಷ್ಯ ಕುಮಾರನು ಪ್ರತ್ಯಕ್ಷನಾಗುವ ಕಾಲದಲ್ಲಿಯೂ ಇರುವದು ಆದುದರಿಂದ *ನಿಮ್ಮ ಕರ್ತನು ಬರುವ* ದಿನವು ನಿಮಗೆ ಗೊತ್ತಿಲ್ಲವಾದುದರಿಂದ ಎಚ್ಚರವಾಗಿರ್ರಿ" (24:42; ಒತ್ತಿ ಹೇಳಿದ್ದು ನನ್ನದು).

> ಇದಲ್ಲದೆ *ಮನುಷ್ಯ ಕುಮಾರನು ತನ್ನ ಮಹಿಮೆಯಿಂದ* ಎಲ್ಲಾ ದೇವದೂತರೊಂದಿಗೆ ಕೂಡಿಬರುವಾಗ ತನ್ನ ಮಹಿಮೆಯ ಸಿಂಹಾಸನದಲ್ಲಿ ಕೂತುಕೊಳ್ಳುವನು ಮತ್ತು ಎಲ್ಲಾ ದೇಶಗಳ ಜನರು ಆತನ ಮುಂದೆ ಕೂಡಿಸಲ್ಪಡುವರು. ಕುರುಬನು ಆಡುಗಳನ್ನೂ ಕುರಿಗಳನ್ನೂ ಬೇರೆಬೇರೆ ಮಾಡುವ ಪ್ರಕಾರ ಆತನು ಅವರನ್ನು ಬೇರೆ ಬೇರೆ ಮಾಡುವ ಪ್ರಕಾರ ಆತನು ಅವರನ್ನು ಬೇರೆ ಬೇರೆ ಮಾಡಿ ಕುರಿಗಳನ್ನು ತನ್ನ ಬಲಗಡೆಯಲ್ಲಿ ಆಡುಗಳನ್ನು ಎಡಗಡೆಯಲ್ಲಿ ನಿಲ್ಲಿಸುವನು. ನಿಮಗೆ ಸತ್ಯವಾಗಿ ಹೇಳುತ್ತೇನೆ ಅನ್ನುವನು. ಮತ್ತು ಇವರು ನಿತ್ಯ ಶಿಕ್ಷೆಗೂ ನೀತಿವಂತರು ನಿತ್ಯ ಜೀವಕ್ಕೂ ಹೋಗುವರು (ಮತ್ತಾಯ 25:31-46; ಒತ್ತಿ ಹೇಳಿದ್ದು ನನ್ನದು).

ಮೇಲಂತಸ್ತಿನಲ್ಲಿ, ಯೇಸುವಿನ ಅಸಮಾನವಾದ ಬೀಳ್ಕೊಡುಗೆಯ ಚರ್ಚೆಯಲ್ಲಿ, ತನ್ನ ಅಪೊಸ್ತಲರಿಗೆ ಹೀಗೆ ಹೇಳಿದನು,

> ನಿಮ್ಮ ಹೃದಯವು ಕಳವಳಗೊಳ್ಳದೆ ಇರಲಿ; ದೇವರನ್ನು ನಂಬಿರಿ, ನನ್ನನ್ನೂ ನಂಬಿರಿ, ನನ್ನ ತಂದೆಯ ಮನೆಯಲ್ಲಿ ಬಹಳ ಬಿಡಾರಗಳು ಅವೆ; ಇಲ್ಲದಿದ್ದರೆ ನಿಮಗೆ ಹೇಳುತ್ತಿದ್ದೇನು; ನಿಮಗೆ ಸ್ಥಳವನ್ನು ಸಿದ್ಧಮಾಡುವದಕ್ಕೆ ಹೋಗುತ್ತೇನಲ್ಲಾ. ನಾನು ಹೋಗಿ ನಿಮಗೆ ಸ್ಥಳವನ್ನು ಸಿದ್ಧಮಾಡಿದ ಮೇಲೆ *ತಿರುಗಿ ಬಂದು* ನಿಮ್ಮನ್ನು ಕರಕೊಂಡು ಹೋಗಿ ನನ್ನ ಬಳಿ ಸೇರಿಸಿಕೊಳ್ಳುವೆನು; ಯಾಕೆಂದರೆ ನಾನಿರುವ ಸ್ಥಳದಲ್ಲಿ ನೀವು ಸಹ ಇರಬೇಕು (ಯೋಹಾನ 14:1-3; ಒತ್ತಿ ಹೇಳಿದ್ದು ನನ್ನದು).

ಹಾಗಿದ್ದರೂ, ಕ್ರಿಸ್ತನು ಮಾತನಾಡಿದ ಮುಂಜಾನೆಯ ನಂತರ, ಆತನನ್ನು ರೋಮಾನ್ನರ ಶಿಲುಬೆಗೆ ಮಳೆಗಳಿಂದ ಹೊಡೆದರು - ಮತ್ತು ಆತನ ಶಿಷ್ಯರ ಕನಸುಗಳು ಮತ್ತು ನಿರೀಕ್ಷೆಗಳೆಲ್ಲವು ಕುಗ್ಗಿ ಹೋದವು.

## ಅಪೊಸ್ತಲರ ಕೃತ್ಯಗಳು ಮತ್ತು ಪತ್ರಿಕೆಗಳು: "ರಾಜನು ಪುನಃ ಬರುತ್ತಾನೆ!"

### ನಿರೀಕ್ಷೆಯು ಜ್ವಾಲೆಯಂತೆ ಉರಿಯುತ್ತಿರುವದು

ಯೇಸು ಮೂರನೇ ದಿನದಲ್ಲಿ ಎದ್ದು ಬಂದಾಗ ನಿರೀಕ್ಷೆಯು ಪುನಃ ಹುಟ್ಟಿತು. ಪರಲೋಕಕ್ಕೆ ಆತನು ಹಿಂತಿರುಗುವದಕ್ಕಾಗಿ ಶಿಷ್ಯರೊಂದಿಗೆ ನಲವತ್ತು ದಿನಗಳ ಕಾಲ ಇದ್ದು ಅವರನ್ನು ಸಿದ್ಧಮಾಡುತ್ತಿದ್ದನು. ಕೊನೆಗೆ ಆತನಿಗೆ ಹೋಗುವ ಸಮಯ ಬಂತು. ಆತನು ಅವರನ್ನು ಎಣ್ಣೆ ಮರಗಳ ಬೆಟ್ಟದ ತನಕ ನಡೆಸಿದನು, ಕೈಗಳನ್ನು ಎತ್ತಿ ಅವರನ್ನು ಆಶೀರ್ವದಿಸಿ, ಮತ್ತು ಪರಲೋಕಕ್ಕೆ ಏರಿಸಲ್ಪಟ್ಟನು. ಅಲ್ಲಿ ಅಪೊಸ್ತಲರು "ಆತನು ಹೋಗುತ್ತಿರುವಾಗ ಅವರು ಆಕಾಶದ ಕಡೆಗೆ ದೃಷ್ಟಿಸಿ ನೋಡುತ್ತಾ ಇರಲಾಗಿ ..." ಇಬ್ಬರು ಪುರುಷರು "ಫಕ್ಕನೆ ಅವರ ಹತ್ತಿರ ನಿಂತುಕೊಂಡು" (ಅಪೊಸ್ತಲರ ಕೃತ್ಯಗಳು 1:10), "ಗಲಿಲಾಯಾದವರೇ, ನೀವು ಯಾಕೆ ಆಕಾಶದ ಕಡೆಗೆ ನೋಡುತ್ತಾ ನಿಂತಿದ್ದೀರಿ? ನಿಮ್ಮ ಬಳಿಯಿಂದ ಆಕಾಶದೊಳಕ್ಕೆ ಸೇರಿಸಲ್ಪಟ್ಟಿರುವ ಈ ಯೇಸು ಯಾವ ರೀತಿಯಲ್ಲಿ ಆಕಾಶದೊಳಕ್ಕೆ ಹೋಗಿರುವದನ್ನು ನೀವು ಕಂಡರೋ ಅದೇ ರೀತಿಯಲ್ಲಿ *ಬರುವನು* ಎಂದು ಹೇಳಿದರು" (ಅಪೊಸ್ತಲರ ಕೃತ್ಯಗಳು 1:11;

ಒತ್ತಿ ಹೇಳಿದ್ದು ನನ್ನದು). ಕ್ರಿಸ್ತನ ಹಿಂಬಾಲಕರು ಹೊಸ ಸಂದೇಶವನ್ನು ಪಡೆದರು: "ರಾಜನು ಪುನಃ ಬರುತ್ತಾನೆ!"

"ರಾಜನು ಬರುತ್ತಾನೆ!" ಎಂಬ ಭರವಸೆಯು ಇಸ್ರಾಯೇಲರಿಗೆ ಪ್ರೋತ್ಸಾಹವುಂಟು ಮಾಡಿತು, ಆದುದರಿಂದ ಮೊದಲಿನ ಕ್ರೈಸ್ತರು "ರಾಜನು ಪುನಃ ಬರುತ್ತಾನೆ!" ಎನ್ನುವದನ್ನು ಎತ್ತಿ ಹಿಡಿದು ಹೇಳುತ್ತಿದ್ದರು. ಪ್ರೇರೇಪಿಸಲ್ಪಟ್ಟ ಬರಹಗಾರರು ಸ್ಥಿರವಾಗಿ ಈ ವಿಷಯವನ್ನು ತಮ್ಮ ಬರವಣಿಗೆಯಲ್ಲಿ ಉಲ್ಲೇಖಿಸುತ್ತಿದ್ದರು. ಒಬ್ಬ ಬರಹಗಾರನ ಪ್ರಕಾರ ಕೊನೆಯ ಪಕ್ಷ, "ಹೊಸ ಒಡಂಬಡಿಕೆಯಲ್ಲಿ 370 ವಚನಗಳು ಆತನು ನ್ಯಾಯಾಧಿಪತಿಯಾಗಿ ಎರಡನೆಯ ಸಾರಿ ಬರುವನು ಎಂದು ಬರೆಯಲಾಗಿವೆ. ಹೊಸ ಒಡಂಬಡಿಕೆಯ 7,959 ವಚನಗಳಲ್ಲಿ ಪ್ರತಿ 25 ವಚನಗಳಲ್ಲಿ ಒಂದು ವಚನವು ಆತನು ತಿರುಗಿ ಬರೋಣದ ಕುರಿತು ಹೇಳುತ್ತವೆ. ಹೊಸ ಒಡಂಬಡಿಕೆಯ 27 ಪುಸ್ತಕದಲ್ಲಿ 23 ಪುಸ್ತಕಗಳು ಈ ಸಿದ್ಧಾಂತದ ಕುರಿತು ಬೋಧಿಸುತ್ತವೆ."[8] ಇಲ್ಲಿರುವ ಕೆಲವು ಭಾಗಗಳು ಈ ಒಂದು ವಿಷಯಕ್ಕೆ ಸಂಬಂಧಪಟ್ಟಿರುತ್ತವೆ.

ಪೌಲನು ಹೀಗೆ ಬರೆಯುತ್ತಾನೆ,

> ಕರ್ತನಾದ ಯೇಸು ಕ್ರಿಸ್ತನು ಅಲ್ಲಿಂದಲೇ ರಕ್ಷಕನಾಗಿ ಬರುವದನ್ನು ಎದುರುನೋಡುತ್ತಾ ಇದ್ದೇವೆ. ಆತನು ಎಲ್ಲವನ್ನು ತನಗೆ ಅಧೀನಮಾಡಿಕೊಳ್ಳಲಾಗುವ ಪರಾಕ್ರಮವನ್ನು ಸಾಧಿಸಿ ದೀನಾವಸ್ಥೆಯುಳ್ಳ ನಮ್ಮ ದೇಹವನ್ನು ರೂಪಾಂತರಪಡಿಸಿ ಪ್ರಭಾವವುಳ್ಳ ತನ್ನ ದೇಹದ ಸಾರೂಪ್ಯವಾಗುವಂತೆ ಮಾಡುವನು (ಫಿಲಿಪ್ಪಿ 3:20, 21).

ರಾಜನು ಹಿಂತಿರುಗಿ ಬರುವಾಗ, ಶಕ್ತಿಗುಂದಿದ, ಬಲಹೀನವಾದ, ಈ ದೇಹ ಹೊಸ ದೇಹದೊಂದಿಗೆ ಬದಲಾಗುತ್ತದೆ. ನಾವು ಮಹಿಮೆಯುಳ್ಳ ಶರೀರಗಳನ್ನು ಹೊಂದುತ್ತೇವೆ - ಆ ದೇಹಗಳು "ಆತನ ಮಹಿಮೆಯ ದೇಹಕ್ಕೆ" ಸಮರೂಪವಾಗಿರುತ್ತವೆ!

ಪೌಲನು ಥೆಸಲೋನಿಕ ಸಭೆಯಲ್ಲಿರುವ ಕ್ರೈಸ್ತರಿಗೆ ಹೀಗೆ ಹೇಳಿದ್ದಾನೆ:

> ನಾವು ಕರ್ತನ ಮಾತಿನ ಆಧಾರದಿಂದ ನಿಮಗೆ ಹೇಳುವದೇನೆಂದರೆ ಕರ್ತನು ಪ್ರತ್ಯಕ್ಷನಾಗುವವರೆಗೂ ಜೀವದಿಂದುಳಿದಿರುವ ನಾವು ನಿದ್ರೆ ಹೋದವರಿಗಿಂತ ಮುಂದಾಗುವದೇ ಇಲ್ಲ. ಕರ್ತನು ತಾನೇ ಆಜ್ಞಾಘೋಷದೊಡನೆಯೂ ಪ್ರಧಾನದೂತನ ಶಬ್ದದೊಡನೆಯೂ ದೇವರ ತುತ್ತೂರಿ ಧ್ವನಿಯೊಡನೆಯೂ ಆಕಾಶದಿಂದ ಇಳಿದುಬರುವನು; ಆಗ ಕ್ರಿಸ್ತನಲ್ಲಿರುವ ಸತ್ತವರು ಮೊದಲು ಎದ್ದು ಬರುವರು.[9] ಆ ಮೇಲೆ ಜೀವದಿಂದುಳಿದಿರುವ ನಾವು ಅಂತರಿಕ್ಷದಲ್ಲಿ ಕರ್ತನನ್ನು ಎದುರುಗೊಳ್ಳುವದಕ್ಕಾಗಿ ಅವರ ಸಂಗಡಲೇ ಮೇಘವಾಹನರಾಗಿ ಫಕ್ಕನೆ ಒಯ್ಯಲ್ಪಡುವೆವು (1 ಥೆಸಲೋನಿಕ 4:15-17).

ಮುಂದಿನ ದಿನಗಳಲ್ಲಿ ಥೆಸಲೋನಿಕ ಕ್ರೈಸ್ತರಲ್ಲಿ ಅನೇಕರು ತಮ್ಮಗೆ ಪ್ರೀತಿಯಾದವರನ್ನು ಕಳಕೊಳ್ಳುವರು. ಆದಕಾರಣ ಮರಣಹೊಂದಿದ್ದವರ ಬಗ್ಗೆ ದುಃಖಿಸಬೇಡಿರಿ ಎಂದು ಪೌಲನು ಹೇಳಿದನು. ನೀತಿವಂತರಾಗಿ ಸತ್ತವರು ತಮ್ಮ ಬಹುಮಾನ ಕಳೆದುಕೊಳ್ಳುವದಿಲ್ಲ - ರಾಜನು ಹಿಂತಿರುಗಿ ಬರುವಾಗ ಅವರು ಎದ್ದು ಬರುವರೆಂದು ಆತನು ವಿವರಿಸಿದನು. "ಆದಕಾರಣ ಈ ಮಾತುಗಳಿಂದ ಒಬ್ಬರನ್ನೊಬ್ಬರು ಸಂತೈಸಿರಿ" (1 ಥೆಸಲೋನಿಕ 4:18) ಎಂದು ಹೇಳಿದನು.

ಯೋಹಾನನು ರಾಜನು ಬರುವ ವಿಷಯವನ್ನು ಪ್ರತಿಧ್ವನಿಸಿದ್ದನು: "ಪ್ರಿಯರಾದ ಮಕ್ಕಳೇ, ಆತನು ಪ್ರತ್ಯಕ್ಷನಾಗುವಾಗ ನಾವು ಆತನ ಆಗಮನದಲ್ಲಿ ಆತನ ಮುಂದೆ ನಿಲ್ಲಲ್ಲು ನಾಚಿಕೆಪಡದೆ ಧೈರ್ಯವಿಂದಿರುವಂತೆ ಆತನಲ್ಲಿ ನೆಲೆಗೊಂಡಿರೋಣ" (1 ಯೋಹಾನ 2:28). ಯಾವಾಗ ರಾಜನು ಬರುತ್ತಾನೋ ನಾವು ಸಿದ್ಧರಾಗಿದ್ದರೆ ಭರವಸೆಯಿಂದ ತುಂಬಿರಬಹುದು - ಅಥವಾ ನಾವು ಸಿದ್ಧರಾಗಿರದಿದ್ದರೆ ನಾಚಿಕೆ ಪಡಬೇಕಾಗುತ್ತದೆ. ಮೊದಲನೆಯ ಯೋಹಾನ

3:2 ಹೀಗೆ ಹೇಳುತ್ತದೆ, "ಈಗ ದೇವರ ಮಕ್ಕಳಾಗಿದ್ದೇವೆ. ಮುಂದೆ ನಾವು ಏನಾಗುವವ್ರೋ ಅದು ಇನ್ನು ಪ್ರತ್ಯಕ್ಷವಾಗಲಿಲ್ಲ. ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆವೆಂದು ಬಲ್ಲೆವು, ಯಾಕೆಂದರೆ ಆತನಿಗಿರುವ ಪ್ರಕಾರವೇ ಆತನನ್ನು ನೋಡುವೆವು."

ಇತರ ವಾಕ್ಯ ಭಾಗಗಳನ್ನು ಕೂಡ ಗಮನಿಸತಕ್ಕದ್ದು, ಆದರೆ ಕ್ರಿಸ್ತನ ಪುನಃ ಬರೋಣದ ಕುರಿತಾದ ಪ್ರಸ್ತಾಪನೆಗೆ ಇವೆಲ್ಲವುಗಳು ಸಾಕಷ್ಟಾಗಿವೆ. ಈಗ ನಾವು ಹೊಸ ಒಡಂಬಡಿಕೆಯನ್ನು ಮುಕ್ತಾಯ ಮಾಡೋಣ. ಇಲ್ಲಿ ಯೇಸು ಕೊಟ್ಟ ಅಂತಿಮ ವಾಗ್ದಾನವಿದೆ: "ಇಗೋ, ಬೇಗ ಬರುತ್ತೇನೆ" ನಾನು ಪ್ರತಿಯೊಬ್ಬನಿಗೆ ಅವನವನ ನಡತೆಯ ಪ್ರಕಾರ ಕೊಡತಕ್ಕ ಪ್ರತಿಫಲವು ನನ್ನ ಕೈಯಲ್ಲಿ ಅದೆ (ಪ್ರಕಟನೆ 22:12). "ನಾನು ಬೇಗನೇ ಬರುತ್ತೇನೆ" ಈ ಮಾತುಗಳು ಅನೇಕರಿಗೆ ಹೊಸದಾಗಿ ಕೇಳಿಸಿತು. ನೂರಾರು ವರ್ಷಗಳು ಕಳೆದು ಹೋಗಿವೆ ಇನ್ನೂ ಆತನು ಬರಲಿಲ್ಲ.[10] Bill Banowsky ಹೀಗೆ ತಿಳಿಸಿದ್ದಾರೆ,

> ಬೈಬಲಿನಲ್ಲಿನ ಮುಕ್ತಾಯ ವಾಕ್ಯ ಭಾಗದಲ್ಲಿರುವ "ಬೇಗನೆ" ಎಂಬುದನ್ನು ಭೂಲೋಕದ ಜೀವದ ಮಿತವಾದ ಮನಸ್ಸಿನಿಂದ ನೋಡಬಾರದು. ಆದರೆ ಕಾಲಮಿತಿಯಿಲ್ಲದ ದೇವರ ಜೀವನವನ್ನು ಅವಲೋಕಿಸತಕ್ಕದ್ದು. ನಮ್ಮ ಲೆಕ್ಕಚಾರದ ಪ್ರಕಾರ ಎರಡು ಸಾವಿರವರ್ಷಗಳು ದಾಟಿ ಹೋಗಿರಬಹುದು, ಆದರೆ ಆತನಿಗೆ ಸಾವಿರ ವರ್ಷಗಳು ಒಂದು ದಿನವಿದ್ದಂತೆ. ದೇವರು ಯಾವುದೇ ಗಡಿಯಾರ ಕೈಗೆ ಕಟ್ಟಿಕೊಂಡಿಲ್ಲ.[11]

ಯೇಸುವಿನ ಮಾತುಗಳು ಆತನು "ಕೂಡಲೇ" ಬರುತ್ತಾನೆಂದು ಅರ್ಥವನ್ನು ಕೊಡುತ್ತಿಲ್ಲ, ಆದರೆ "ಆಸನ್ನ"[12] ವಾಗುವನೆಂದು ಅರ್ಥಕೊಡುತ್ತದೆಂದು Banowsky ಅವರು ಸಲಹೆ ನೀಡಿದ್ದಾರೆ. "ಆಸನ್ನ" ಎಂದರೆ ಯಾವ ಗಡಿಯಲ್ಲಾದರೂ ಸಂಭವಿಸಬಹುದು ಎಂದರ್ಥ. ಮೊದಲಿನ ಕ್ರೈಸ್ತರು ಇದನ್ನು ನಿಜವೆಂದು ನಂಬಿದರು ನಾವು ಕೂಡ ನಂಬಬೇಕಿದೆ. ಸತ್ಯವೇದದ ಕೊನೆಯ ಎರಡು ವಚನಗಳಲ್ಲಿ ಯೋಹಾನನು ಯೇಸುವಿನ ವಾಗ್ದಾನವನ್ನು ಪುನರುಚ್ಚರಿಸಿದನು: "ಈ ವಿಷಯಗಳಲ್ಲಿ ಸಾಕ್ಷಿ ಹೇಳುವವನು ನಿಜವಾಗಿ ಬೇಗ ಬರುತ್ತಾನೆ" ಎಂದು ಹೇಳುತ್ತಾನೆ (ಪ್ರಕಟಣೆ 22:20ಎ). ನಂತರ ಅಪೊಸ್ತಲನು, ಹಾಗೆಯೇ ಆಗಲಿ, "ಆಮೇನ್. ಕರ್ತನಾದ ಯೇಸುವೆ ಬೇಗ ಬಾ" (ಪ್ರಕಟಣೆ 22:20ಬಿ) ಎಂದು ಹೇಳಿದನು.

ರಾಜನು ಮಹಿಮೆ ಮತ್ತು ಬಲದೊಂದಿಗೆ, ಕಾಣುವಂತೆ,[13] ಕೇಳುವಂತೆ, ಎಚ್ಚರಿಕೆ[14] ಕೊಡದೆ ಬರುತ್ತಾನೆಂದು ಹೊಸ ಒಡಂಬಡಿಕೆಯ ಬರಹಗಾರರು ಬೋಧಿಸಿದರು. ಸತ್ತವರನ್ನು ಎಬ್ಬಿಸಿ, ಎಲ್ಲರಿಗೆ ನ್ಯಾಯ ತೀರಿಸಲು, ಬಹುಮಾನ ಮತ್ತು ಶಿಕ್ಷೆಯನ್ನು ಕೊಡಲು ಯೇಸು ಬರುವನು ಎಂದು ಅವರು ಬೋಧಿಸಿದರು. ಅನ್ಯಾಯವು ತುಂಬಿದ ಪ್ರಪಂಚದಲ್ಲಿ,[15] ರಾಜನು ಬಂದು ಎಲ್ಲವನ್ನು ಸರಿಪಡಿಸುವನು ಎಂದು ಸಂದೇಶವನ್ನು ಸಾರುತ್ತಿದ್ದರು!

ರಾಜನ *ಮೊದಲ* ಬರೋಣದ ನಿರೀಕ್ಷೆಯು ಇಸ್ರಾಯೇಲ್ಯರ ಜೀವಮಾನದ ಮೇಲೆ ಪರಿಣಾಮವನ್ನು ಬೀರಿತ್ತು. ಅದರಂತೆ, ಆತನ *ಎರಡನೆ* ಬರೋಣದ ನಿರೀಕ್ಷೆಯು ಕೂಡ ಆದಿ ಕ್ರೈಸ್ತರಿಗೆ ಪರಿಣಾಮಕಾರಿಯಾಗಿದೆ:

- ಇದು ಅವರನ್ನು *ಬದಲಾವಣೆ* ಮಾಡಿತು. ಇದು ಅವರ ದೃಷ್ಟಿಯನ್ನು ಬದಲಾಯಿಸಿತು. "ರಾಜನು ಪುನಃ ಬರುವನು!" ಎನ್ನುವ ಅಂಶವು ಅವರ ಜೀವನದ ಮುಖ್ಯಾಂಶವಾಗಿ ಆಲೋಚಿಸಿದ್ದರಿಂದ ಜೀವನವನ್ನು ಬೇರೆ ರೀತಿಯಲ್ಲಿ ನೋಡುವಂತೆ ಮಾಡಿತು.
- ಇದು ಅವರನ್ನು *ಸವಾಲು* ಮಾಡಿತು. ಎರಡನೆ ಬರೋಣದ ಕುರಿತು ಮಾತಾಡುತ್ತಾ, ಪೇತ್ರನು ಹೀಗೆ ಬರೆಯುತ್ತಾನೆ,

> ಕರ್ತನ ದಿನವು ಕಳ್ಳನು ಬರುವಂತೆ ಬರುತ್ತದೆ. ಆ ದಿನದಲ್ಲಿ ಆಕಾಶ ಮಂಡಲವು ಮಹಾಘೋಷದಿಂದ ಇಲ್ಲದೆ ಹೋಗುವದು, ಸೂರ್ಯ ಚಂದ್ರ ನಕ್ಷತ್ರಗಳು ಉರಿದು ಲಯವಾಗಿ ಹೋಗುವವು, ಭೂಮಿಯೂ ಅದರಲ್ಲಿರುವ ಕೆಲಸಗಳೂ ಸುಟ್ಟು ಹೋಗುವವು.
>
> ಇವೆಲ್ಲವುಗಳು ಹೀಗೆ ಲಯವಾಗಿ ಹೋಗುವವದರಿಂದ ನೀವು ದೇವರ ದಿನದ ಪ್ರತ್ಯಕ್ಷತೆಯನ್ನು ಎದುರು ನೋಡುತ್ತಾ ಹಾರೈಸುತ್ತಾ ಎಷ್ಟೋ ಪರಿಶುದ್ಧವಾದ ನಡವಳಿಕೆಯೂ ಭಕ್ತಿಯೂ ಉಳ್ಳವರಾಗಿರಬೇಕಲ್ಲಾ. ಆ ದಿನದಲ್ಲಿ ಆಕಾಶಮಂಡಲವು ಬೆಂಕಿಹತ್ತಿಲಯವಾಗಿ ಹೋಗುವದು, ಸೂರ್ಯ ಚಂದ್ರ ನಕ್ಷತ್ರಗಳು ಉರಿದು ಕರಗಿ ಹೋಗುವವು ... ! (2 ಪೇತ್ರ 3:10-12).

ತತ್ಫಲಿತವಾಗಿ ಯೋಹಾನನು ಯೆಹೂದ್ಯರಿಗೆ "ರಾಜನು ಪುನಃ ತಿರುಗಿ ಬರುತ್ತಾನೆ!" ಎಂದು ಹೇಳಿದನು, ಆಗ ಅವರು ಪಶ್ಚಾತ್ತಾಪಪಟ್ಟು ಅವರ ಜೀವಿತಗಳನ್ನು ಬದಲಾಯಿಸಿಕೊಂಡರು. "ರಾಜನು ಪುನಃ ಬರುತ್ತಾನೆ!" ನಮ್ಮ ಜೀವಿತಗಳನ್ನು ಬದಲಾವಣೆ ಮಾಡಿಕೊಳ್ಳಬೇಕು ಎಂಬ ನಿಜಾಂಶವನ್ನು ಪೇತ್ರನು ಹೇಳಿದನು. ಒಂದು ವೇಳೆ ಅಮೇರಿಕಾ ದೇಶದ[16] ಅಧ್ಯಕ್ಷರು ನಿಮ್ಮ ಮನೆಗೆ ಊಟಕ್ಕೆ ಬರುತ್ತೇನೆ ಎಂದು ಸಮಯ ಕೊಟ್ಟರೆ? "ನಾನು ಏನು ಸೇವೆ ಮಾಡಬೇಕು? ನಾನು ಯಾವ ವಸ್ತ್ರಧರಿಸಿಕೊಳ್ಳಬೇಕು? ನನ್ನ ಮನೆ ಚೆನ್ನಾಗಿ ಕಾಣಲು ನಾನು ಏನು ಬದಲಾವಣೆ ಮಾಡಬೇಕು?" ಎಂದು ನಿನ್ನಷ್ಟಕ್ಕೆ ನೀನೇ ಕೇಳುವುದಿಲ್ಲವೋ. ರಾಜನು ಪುನಃ ಬರುತ್ತಾನೆ ಎನ್ನುವ ಅಂಶ ಬರುವಾಗ ಒಂದು ಪ್ರಶ್ನೆ ನಮ್ಮ ಆಲೋಚನೆಯಲ್ಲಿ ಬರುತ್ತದೆಂದು ಪೇತ್ರನು ಹೇಳುತ್ತಾನೆ: "ಯಾವ ರೀತಿಯ ಪರಿಶುದ್ಧತೆ ಮತ್ತು ಒಳ್ಳೆಯತನಕ್ಕೆ ಬದ್ಧವಾಗಿರಬೇಕು?"

- ಇದು ಅವರಿಗೆ *ಸ್ಥಿರಪಡಿಸಿದೆ.* ರಾಜನು ಬರುತ್ತಾನೆ ಎನ್ನುವ ಅಂಶದಲ್ಲಿ ಅವರು *ಬಲವನ್ನು* ಕಂಡುಕೊಂಡಿದ್ದಾರೆ. ಅವರ ಜೀವನದಲ್ಲಿ ಏನೇ ಆದರೂ ರಾಜನು ಬಂದು ಸತ್ಯವನ್ನು ಪ್ರತಿಪಾದಿಸುವನೆಂದು ತಿಳಿದಿದ್ದರು. ಯೋಹಾನನಂತೆ, ಅವರು ಪ್ರಾರ್ಥಿಸಿದರು. "ಕರ್ತನಾದ ಯೇಸುವೇ, ಬಾ!" ಅವರಲ್ಲಿ "ಮಾರನಾಥ" (1 ಕೊರಿಂಥ 16:22ಬಿ) ಎಂಬುದಾಗಿ ವ್ಯಕ್ತಪಡಿಸುವಿಕೆಯಾಗಿದೆ. ಇದು ಅರಾಮಿಕ್ ಭಾಷೆಯಲ್ಲಿ ಪ್ರಾಥಮಿಕವಾಗಿ "ಓ ಕರ್ತನೇ, ಬಾ!" ಎಂದರ್ಥವಾಗಿದೆ. ಆತನು ಬರುವನು ಮತ್ತು ಆತನ ಬರುವಿಕೆಯ ಪ್ರಾರ್ಥನೆಯನ್ನು ತೀವ್ರಗೊಳಿಸುವನು ಎಂಬುದರ ವಿಶ್ವಾಸವನ್ನು ವ್ಯಕ್ತಪಡಿಸುವದಾಗಿದೆ. ಆತನ ಬರೋಣಕ್ಕೆ ಪೇತ್ರನು ಉಪಯೋಗಿಸಿದ ಶಬ್ದಗಳು ಹೀಗಿವೆ, ಅವರು "ದೇವರ ದಿನದ ಪ್ರತ್ಯಕ್ಷತೆಯನ್ನು ಎದುರು ನೋಡುತ್ತಾ ಹಾರೈಸುತ್ತಾ" ಇದ್ದರು (2 ಪೇತ್ರ 3:12). Massillon ಪ್ರಕಾರ, "ಕರ್ತನ ಬರೋಣದ ಬಗ್ಗೆ ನಿಟ್ಟುಸುರು ಬಿಡುವುದು ವಿಶ್ವಾಸ ಭ್ರಷ್ಟಾಚಾರವಾಗಿದೆ."[17]
- ಇದು ಅವರಿಗೆ *ಸಂತೈಸಿದೆ.* ಯಾವಾಗ ಪೌಲನು ಥೆಸಲೋನಿಕದವರಿಗೆ ರಾಜನು ಬರುತ್ತಾನೆಂದು ಭರವಸೆಯನ್ನು ಕೊಟ್ಟು, ಹೀಗೆ ಬರೆಯುತ್ತಾನೆ, "ಆದುದರಿಂದ ಈ ಮಾತುಗಳಿಂದ ಒಬ್ಬರನ್ನೊಬ್ಬರು ಸಂತೈಸಿರಿ" (1 ಥೆಸಲೋನಿಕ 4:18). ಅವರು ನಂಬಿಕೆಯಲ್ಲಿ ಸತ್ತರೂ ಕೂಡ ರಾಜನು ಬಂದಾಗ ಅವರನ್ನು ಎಬ್ಬಿಸುವನು ಮತ್ತು ಅವರು ಆತನೊಂದಿಗೆ ಎಂದೆಂದಿಗೂ ನಿತ್ಯತ್ವದಲ್ಲಿ ಇರುವರು!

### ನಿರೀಕ್ಷೆ ಬಾಡಿಹೋಗುತಿತ್ತು

ಆತನ ಎರಡನೆಯ ಬರೋಣದ ಕುರಿತು ಸತ್ಯವೇದದ ಕೊನೆಯ ವಚನವು

1900 ವರ್ಷಗಳ ಹಿಂದೆ ಬರೆಯಲ್ಪಟ್ಟಿದೆ. ಶತಮಾನಗಳು ಗತಿಸಿದವು, ಆದರೂ ರಾಜನು ಬರಲಿಲ್ಲ. ನಾವು ಭೂಲೋಕಕ್ಕೆ ಬಂದಿಸಿದವರಾಗಿದ್ದೇವೆ, ಪರಲೋಕದ ಅಳತೆ ನಮ್ಮ ಕಣ್ಣುಗಳು ದೃಷ್ಟಿಸುತ್ತಿಲ್ಲ. ಕೇವಲ ಒಂದು ಬೋಧನೆ ಮತ್ತು ಕಲಿಸುವಿಕೆಯ ಮುಖಾಂತರ ಎರಡನೆಯ ಬರೋಣದ ಕುರಿತು ಜನರಿಗೆ, ಎತ್ತಲ್ಪಡುವವರ ಘಟನೆಗಳು, ಸಂಕಟಕಾಲಗಳು, ಮತ್ತು ಭೂಲೋಕದಲ್ಲಿ ಕ್ರಿಸ್ತನ ಆಳ್ವಿಕೆ ಕುರಿತು ತಾವು ಸಿದ್ಧಮಾಡಿದ ಕಥೆಗಳ ಮುಖಾಂತರ ಜನರಿಗೆ ಭ್ರಮೆಯನ್ನುಂಟು ಮಾಡುತ್ತಿದ್ದಾರೆ, ನಮ್ಮಲ್ಲಿ ಬಹುತೇಕ ಜನರು ಈ ಲೋಕದಲ್ಲಿರುವ ವಿಷಯಗಳಿಗೆ ಅಭಿರುಚಿವುಳ್ಳವರಾಗಿದ್ದೇವೆ; ನಾವು ಈ ಜೀವಿತಕ್ಕೆ ಹೊಂದಿಕೊಂಡಿದ್ದೇವೆ. ಯಾಕೆಂದರೆ ರಾಜನು ತಿರುಗಿ ಬರುವಿಕೆಯ ಬಗ್ಗೆ ನಮ್ಮ ಮನಸ್ಸುಗಳಲ್ಲಿ ನಿಸ್ಸಾರಗೊಂಡಿದೆ, ಮೊದಲನೆ ಶತಮಾನದ ಕ್ರೈಸ್ತರು ಪರಿಣಾಮ ಹೊಂದಿದ ಹಾಗೆ ನಾವು ಇದರ ವಿಷಯದಲ್ಲಿ ಹೊಂದಿಲ್ಲ:

- ಇದರಿಂದ ನಾವು *ಬದಲಾವಣೆ* ಹೊಂದಲಿಲ್ಲ. ನಮ್ಮ ಸುತ್ತಲಿರುವ ಅನ್ಯರ ಹಾಗೆ, ನಮ್ಮ *ಈ* ಬದುಕು ಪೂರ್ವಭಾವಿಯಾಗಿ ಕಲ್ಪಿಸಿದ ಯೋಚನೆಗಳನ್ನು ತುಂಬಿಕೊಂಡಿವೆ.
- ಇದರಿಂದ ನಾವು *ಪ್ರತಿಭಟನೆಗೆ* ಒಳಗಾಗಲಿಲ್ಲ. *ಎಲ್ಲಾ* ಸಮಯದಲ್ಲಿ, ಸಿದ್ಧರಾಗಿರುವ ಅವಶ್ಯಕತೆಯನ್ನು ಪರಿಗಣಿಸುವುದಿಲ್ಲ.
- ಯಾಕೆಂದರೆ ಐಹಿಕ ದೃಷ್ಟಿಯಿಂದ, ಈ ಸತ್ಯವು - ಬಲವು - ತೆಗೆದುಕೊಂಡು ಬರುತ್ತದೆಂಬ *ದೃಢತೆ* ನಮಗಿಲ್ಲ. ನಾವು ಜೀವನದಲ್ಲಿ ಇಹಲೋಕದ ಬಂದನದಲ್ಲಿ ಕಟ್ಟಲ್ಪಟ್ಟಿದ್ದೇವೆ.
- "ರಾಜನು ಬರುತ್ತಾನೆ!" ಎಂಬ ನಂಬಿಕೆಯಿಂದ ಆದಿ ಕ್ರೈಸ್ತರು ಹೊಂದಿದ *ಸಮಾಧಾನವನ್ನು* ನಾವು ಎಂದೆಂದಿಗೂ ಅನುಭವಿಸುತ್ತಿಲ್ಲ. ಈ ಸಮಾಧಾನ *ಅವಶ್ಯವಾಗಿದೆ.* ನಾವು ಯಾವಾಗ ಬೀಳುತ್ತೇವೋ, ಯಾವಾಗ ಈ ಪ್ರಪಂಚವು ಬೀಳುವದನ್ನು ನೋಡುತ್ತೇವೋ, ಸೈತಾನನು ಯುದ್ಧ ಗೆಲ್ಲುವದನ್ನು ನೋಡುತ್ತೇವೋ, ಯಾವಾಗ ಸಭೆಗಳು ಮತ್ತು ಸಭಾ ಸದಸ್ಯರುಗಳು ನಮ್ಮನ್ನು ನಿರಾಶೆಗೊಳಿಸುವರೋ, ಆಗ "ರಾಜನು ಬರುತ್ತಾನೆ! ಎಂಬುದನ್ನು ಅರಿಯುವದು ನಮಗೆ ಯಾವ ಸಮಾಧಾನ ತರುತ್ತದೆ.

ಕೆಲವೊಬ್ಬರು ಹೊಸ ಒಡಂಬಡಿಕೆಯ ಕ್ರೈಸ್ತತ್ವವು ಪುನಃ ಸ್ಥಾಪಿಸಲ್ಪಡಬೇಕಾದರೆ ಹೊಸ ಒಡಂಬಡಿಕೆಯ ಅತ್ಯಾಶ್ಚರ್ಯ ಸಂಗತಿಗಳನ್ನು ಅಂದರೆ ದೇವರು ಬರುವ ಕಾಲ ಹತ್ತಿರವಾಗಿದೆ ಎನ್ನುವ ವಿಷಯ ಪುನಃ ಹೇಳುವವರೆಗೆ ಅದು ಪುನಃ ಸ್ಥಾಪಿಸಲ್ಪಡುವದಿಲ್ಲ ಎಂಬುದಾಗಿ ಹೇಳಿದ್ದಾರೆ. ನಾವು ಏನು ಮಾಡಬೇಕು? ನಾವು ಹೆಚ್ಚಾಗಿ ಕ್ರಿಸ್ತನ ಎರಡೆಯ ಬರೋಣ ಕುರಿತು ಹೆಚ್ಚಾಗಿ ಬೋಧಿಸಬೇಕು ಮತ್ತು ಕಲಿಸಬೇಕು. ಅನೇಕ ಶ್ರೇಷ್ಟವಾದ ಹಾಡುಗಳು ಈ ಅಂಶಕ್ಕೆ ಸಂಬಂಧಿಸಿವೆ;[18] ಅವುಗಳನ್ನು ಹೆಚ್ಚಾಗಿ ಹಾಡಬೇಕು. ಹೇಗಾದರೂ ಮಾಡಿ ಪ್ರತಿಯೊಬ್ಬ ಕ್ರೈಸ್ತರು ವೈಯಕ್ತಿಕವಾಗಿ ತಮ್ಮ ಹೃದಯಗಳಲ್ಲಿ ಆಳವಾಗಿ ಇದನ್ನು ಇಟ್ಟುಕೊಳ್ಳಬೇಕು, "ರಾಜನು ಬರುತ್ತಾನೆ! ಎಂಬ ದೃಷ್ಟಿಯಿಂದ ನೋಡುವುದು ಅತಿ ದೊಡ್ಡ ಅವಶ್ಯಕವಾಗಿದೆ. ಆತನು ಮುಂದಿನ ಐದು ನಿಮಿಷದಲ್ಲಿ *ಬರಬಹುದು* ಅಥವಾ ಬರದೆ *ಇರಬಹುದು,* ಆದರೆ *ಆತನಿಗೆ ಸಾಧ್ಯವಿದೆ.* ರಾಜನು ಬರುತ್ತಾನೆ - ಮತ್ತು ಅದು ಎಲ್ಲವನ್ನು ಬದಲಾಯಿಸುವನು!"

## ಮುಕ್ತಾಯ

ಒಂದು ವೇಳೆ ರಾಜನು ಈಗಲೇ ಬರುವುದಾದರೆ ನಿಮ್ಮ ಪ್ರತಿಕ್ರಿಯೆ ಏನಾಗಿದೆ? ತಕ್ಷಣವೇ ನಾವೆಲ್ಲರೂ ತುತ್ತೂರಿ ಶಬ್ದ ಕೇಳಿದಾಗ, ಕಟ್ಟಡವು ಮಧ್ಯದಲ್ಲಿ ಸೀಳಿ ಛಾವಣಿಯು

ಬಿದ್ದು ಹೋಗುವದೋ? ನಾವು ಮೇಲೆ ಯೇಸುವಿನ ಮಹಿಮೆ ಮತ್ತು ಆತನ ದೇವದೂತರ ಮಹಿಮೆ ನೋಡಿದಾಗ ಏನಾಗುವುದೋ? ಜನರು ಅಲ್ಲಿ ಇಲ್ಲಿ ಗಾಳಿಯಲ್ಲಿ ಎತ್ತಲ್ಪಡುವಾಗ ಏನಾಗುತ್ತದೆ? (ನೋಡಿರಿ 1 ಥೆಸಲೋನಿಕ 4:16, 17.) ಆತನ ಬರೋಣ ನೋಡಲು ನಿನ್ನ ಎದೆ ಝುಲ್ಲೆನ್ನುತ್ತಿದೆಯೋ ಅಥವಾ ನೀನು ಹೆದುರುತ್ತಿದ್ದೀಯೋ? ನಾವು ಯೋಹಾನನೊಂದಿಗೆ ಹೇಳೋಣವ್ರೋ - ನಿಜವಾಗಿಯೂ - "ಹಾಗೆಯೇ ಆಗಲಿ. ನಿಜವಾಗಿ ಕರ್ತನೇ, ಬಾ" (ಪ್ರಕಟಣೆ 22:20ಬಿ)? ರಾಜನು *ಬರುತ್ತಾನೆ*! ನೀವು ನಂಬಬಹುದು ಆತನು ಬರುತ್ತಿದ್ದಾನೆ! ಆತನ ಬರೋಣಕ್ಕಾಗಿ ನೀವು ಸಿದ್ಧರಾಗದಿದ್ದರೆ, ಈ ದಿನ ನೀವು ಸಿದ್ಧರಾಗುವದಕ್ಕಾಗಿ ನಾನು ಪ್ರಾರ್ಥಿಸುತ್ತೇನೆ.[19]

---

ಟಿಪ್ಪಣಿಗಳು

[1]ಇದು ಸತ್ಯವೇದದ ವಿವಿಧ ಭಾಗಗಳಾಗಿ ಈ ಅಂಶಗಳನ್ನು ಅಳವಡಿಸಿಕೊಳ್ಳಲಾಗಿದೆ. "ಕ್ರಿಸ್ತನು ಬರುತ್ತಿದ್ದಾನೆ"; "ಕ್ರಿಸ್ತನು ಇಲ್ಲಿದ್ದಾನೆ"; "ಕ್ರಿಸ್ತನು ಪುನಃ ಬರುತ್ತಾನೆ." [2]William S. Banowsky, *Sermons of William S. Banowsky*, Great Preachers of Today series, vol. 11, ed. J. D. Thomas (Abilene, Tex.: Biblical Research Press, 1965), 211. ಹಳೇ ಒಡಂಬಡಿಕೆಯ ಅಂದಾಜಿನ ಸಂಖ್ಯೆ. ಲೇಖಕರಿಂದ ಲೇಖಕರಿಗೆ ಬರಹಗಾರರಿಂದ ಬರಹಗಾರರಿಗೆ ಮೆಸ್ಸೀಯನ ಪ್ರವಾದನಗಳು ಬೇರೆಯಾಗಿವೆ. ಆದರೆ ನಿಖರವಾದ ಸಂಖ್ಯೆಯು ಮಹತ್ವದಲ್ಲ. [3]ಕೀರ್ತನೆ 2 "ರಾಯಭಾರಿಯ ಕೀರ್ತನೆ" ಯಾಗಿದೆ ಇದನ್ನು ಭೂಲೋಕದ ಇಸ್ರಾಯೇಲರ ಅರಸರಿಗೆ ಹೋಲಿಸಲಾಗಿದೆ. ಆದರೆ ಬಹುಜನ ಯೆಹೂದ್ಯರು ಮೆಸ್ಸೀಯನು ಬರುವವರೆಗೆ ಈ ಕೀರ್ತನೆ ನೆರವೇರುವುದಿಲ್ಲ ಎಂದು ತಿಳಿದುಕೊಂಡಿದ್ದಾರೆ. ಹೊಸ ಒಡಂಬಡಿಕೆಯ ಬೋಧಕರು ಮತ್ತು ಬರಹಗಾರರು ಈ ಕೀರ್ತನೆಯ ಭಾಗಗಳನ್ನು ಯೇಸುವಿಗೆ ಹೋಲಿಸುತ್ತಾರೆ (ಅಪೊಸ್ತಲರ ಕೃತ್ಯಗಳು 13:13; ಇಬ್ರಿಯ 1:5; 5:5; ಪ್ರಕಟಣೆ 12:5). [4]ಉದಾಹರಣೆಗೆ ಬೋಧಕರು ನೇಮಕವಾಗುವಾಗ ಎಣ್ಣೆಯಿಂದ ಅಭಿಷೇಕ ಹೊಂದುತ್ತಿದ್ದರು ಮತ್ತು ಪ್ರವಾದಿಗಳು ಕೆಲವು ಸಾರಿ ಎಣ್ಣೆಯಿಂದ ಅಭಿಷೇಕ ಹೊಂದುತ್ತಿದ್ದರು. [5]Landon B. Saunders, "The King is Coming!" *Abilene Christian University Lectures* (1980), 104. [6]ನಿಮ್ಮ ಮಾರ್ಗಗಳು ನನ್ನ ಮಾರ್ಗಗಳಲ್ಲ (ಯೆಶಾಯ 55:8, 9). [7]ಇದಕ್ಕೆ ಸಂಬಂಧಿಸಿದ ಅನೇಕ ಭಾಗಗಳನ್ನು ಪಟ್ಟಿಮಾಡಲಾಗಿದೆ. ಉದಾಹರಣೆಗಾಗಿ ನೋಡಿರಿ (ಮತ್ತಾಯ 16:27; 26:64). [8]Banowsky, 211. [9]ಈ ಭಾಗವು ಸಾವಿರ ವರ್ಷಕ್ಕಿಂತ ಮೊದಲಿನವರು ಇದನ್ನು ಮನುಷ್ಯನು ತಾನೇ ಇದನ್ನು ವಿಂಗಡವಾಗಿ ಮಾಡಿ "ಎತ್ತಲ್ಪಡುವದು" ಎನ್ನುವ ಸಿದ್ದಾಂತವನ್ನು ಬೋಧಿಸಿದಾಗ್ಯೂ ಅವರು "ಪ್ರಥಮ" ಎನ್ನುವ ಶಬ್ದದ ಮೇಲೆ ಹೆಚ್ಚಾಗಿ ಹೇಳುತ್ತಿದ್ದರು. "ಪ್ರಥಮ" ಎನ್ನುವಾಗ ನೀತಿವಂತರಾಗಿ ಸತ್ತವರು "ಪ್ರಥಮವಾಗಿ" ಎದ್ದೇಳುವರು ನಂತರ ಅನೀತಿವಂತರ ಏಳು ವರ್ಷಗಳು (ಅವರ ಸಿದ್ದಾಂತದ ಪ್ರಕಾರ) ನಂತರವೇ ಅನೀತಿವಂತರು, ಎದ್ದೇಳುವರು ಎಂದು ತಿಳಿದಿದ್ದರು. ಈ ಭಾಗದಲ್ಲಿ "ಪ್ರಥಮ" ಎನ್ನುವಾಗ ಈ ರೀತಿಯಲ್ಲಿ ಹೇಳುವಂಥದ್ದಲ್ಲ. ಆದರೆ "ಪ್ರಥಮ" ಎನ್ನುವ ಶಬ್ದ ಹೇಳುವರು ಸತ್ತವರು ಮತ್ತು ಬದುಕಿದ್ದವರಿಗೆ ಮಾತ್ರ, ವಾಕ್ಯವು ಈ ರೀತಿ ಹೇಳುತ್ತದೆ. "ಕ್ರಿಸ್ತನಲ್ಲಿ ಮೊದಲು ಸತ್ತವರು ಪ್ರಥಮವಾಗಿ ಎದ್ದೇಳುವರು ನಂತರ ಜೀವಂತವಾಗಿರುವವರು ಎದ್ದು ಆತನನ್ನು ಎದುರುಗೊಳ್ಳುವರು. ಸತ್ಯವೇದ ನಮಗೆ ಕಲಿಸುತ್ತದೆ. ಎಲ್ಲರೂ ಒಳ್ಳೆಯವರು ಮತ್ತು ಕೆಟ್ಟವರು ಒಂದೇ ಸಮಯದಲ್ಲಿ ಎದ್ದೇಳುವರು (ಯೋಹಾನ 5:28, 29). [10]ಕೆಲವೊಬ್ಬರು ಈ ಭಾಗವು ಎರಡನೆಯ ಬರೋಣದ ಕುರಿತಾಗಿ ಇದೆ ಎಂದು ನಂಬುವುದಿಲ್ಲ. ತಾತ್ಕಾಲಿಕವಾದ ನ್ಯಾಯತೀರ್ಪಿನ ಕೆಟ್ಟ ಮನುಷ್ಯರ ಮೇಲೆ ಬರುತ್ತದೆ. ಅದು ಆದಿ ಸಭೆಯವರ ಮೇಲೆ ಬರುತ್ತದೆ ಎಂದು ತಿಳಿದುಕೊಂಡಿದ್ದಾರೆ, ಹೀಗೆ ಪ್ರಕಟಣೆಯ ಪುಸ್ತಕವು ಎರಡನೆ ಬರೋಣದ ಕುರಿತಾದ ಒಂದು ಚರ್ಚೆಯಲ್ಲಿ ಮುಂದುವರಿದಿರುವಂತೆ ಕಾಣಿಸುತ್ತದೆ.

[11]Banowsky, 213–14. [12]Ibid., 213. [13]ಅನೇಕರು ಕ್ರಿಸ್ತನು ಹಿಂತಿರುಗಿ ಬರುವಿಕೆಯ ಸಮಯವನ್ನು ನಿಗದಿಪಡಿಸಿ ಹೇಳುತ್ತಾರೆ. ಯಾವಾಗ ಅವರು ಬಹುಶಃ ನುಡಿದಂತೆ ಬರದಿದ್ದರೆ, ಕೆಲವೊಬ್ಬರು ಉಪಾಯದಿಂದ ತಮ್ಮ ಪ್ರಖ್ಯಾತಿಯನ್ನು ಉಳಿಸಿಕೊಳ್ಳಲು ಹೀಗೆ ಹೇಳುತ್ತಾರೆ. "ಆತನು ಬಂದಿದ್ದಾನೆ" ಆತನು ಕಾಣಿಸಿಕೊಳ್ಳುವದನಾಗಿ ಬಂದಿದ್ದಾನೆ. ಕೆಲವರನ್ನು ಆರಿಸಿಕೊಂಡು ಅವರ

ಸಮಯ ಈಗ ಸರಿಯಿಲ್ಲ ನಂತರ ಆತನು ಬರುತ್ತಾರೆ ಎಂದು ಹೇಳುವರು. "ಸತ್ಯವೇದ ಬೋಧಿಸುತ್ತದೆ ಏನೆಂದರೆ ಯಾವಾಗ ಕ್ರಿಸ್ತನು ಹಿಂತಿರುಗಿ ಬರುತ್ತಾನೋ" *ಎಲ್ಲರ ಕಣ್ಣುಗಳು* ಆತನನ್ನು ಕಾಣುವವು (ಪ್ರಕಟಣೆ 1:7; ಒತ್ತಿ ಹೇಳಿದ್ದು ನನ್ನದು). [14]ಯಾರು ಆತನ ಬರೋಣದ ಕುರಿತು ಸಮಯ ನಿಗದಿ ಮಾಡುತ್ತಾರೋ ಅವರು ರಾಜನು ಬರುತ್ತಿದ್ದಾನೆ ಎನ್ನುವ ಹೊಸ ಒಡಂಬಡಿಕೆಯ ಬೋಧನೆಗೆ ಸ್ವಲ್ಪ ಗಮನ ಕೊಡಬೇಕು "ಕಳ್ಳನು ರಾತ್ರಿ ಬರುವಂತೆ" (1 ಥೆಸಲೋನಿಕ 5:2; ನೋಡಿ ಮತ್ತಾಯ 24:42-44; 1 ಥೆಸಲೋನಿಕ 5:4; 2 ಪೇತ್ರ 3:10; ಪ್ರಕಟಣೆ 3:3; 16:15). [15]ನಿಮಗೆ ಎರಡನೆ ಬರೋಣದ ಕುರಿತು ಸ್ಪಷ್ಟನೆ ಕೊಡಲು ಕೆಲವು ಸತ್ಯಗಳು ನಿಮಗೆ ಬೇಕಾಗಬಹುದು. ಉದಾಹರಣೆಗೆ, ಸಾವಿರವರ್ಷಗಳ ಹಿಂದೆ ಬೋಧಿಸಿದಂತೆ ಆತನು ಹಿಂತಿರುಗಿ ಬರುವುದಿಲ್ಲ ಎನ್ನುವ ಅಂಶ ಕಂಡುಕೊಳ್ಳುವದು ನಿಮಗೆ ಬೇಕಾಗಬಹುದು. ರಾಜಧಾನಿ/ಸಭೆಯು ಈಗಾಗಲೇ ಸ್ಥಾಪಿಸಲ್ಪಟ್ಟಿದೆ. [16]ನಿನಗಿರುವ ಸ್ಥಳದಲ್ಲಿ ಗೌರವವುಳ್ಳ ಹೆಸರನ್ನು ಉಪಯೋಗಿಸು. [17]Banowsky, 214 ರಲ್ಲಿ ಹೇಳಲಾಗಿದೆ. Jean Baptiste Massillon ಅವರು "the Bishop of Cleremontನ್ನು" ಕರೆದರು ಮತ್ತು ನಾಲ್ಕನೇ ಲೂಯಿಸನ ನ್ಯಾಯಾಧಿಕಾರಿಯಾಗಿ ಫ್ರಾನ್ಸ್‌ನಲ್ಲಿ ಸೇವೆಸಲ್ಲಿಸಿದ್ದಾನೆ. [18]ಈ ಅಂಶದೊಂದಿಗೆ ಹಾಡುಗಳು ಇರುವುದಾದರೆ ನಿಮ್ಮ ಬೋಧನೆಯಲ್ಲಿ ಹೆಚ್ಚಾಗಿ ಉಪಯೋಗಿಸಿರಿ ಅದರಲ್ಲಿ ಹೆಚ್ಚಾಗಿ ಶಬ್ಧಗಳನ್ನು ನೀವು ಉಪಯೋಗಿಸಬಹುದು. [19]ಈ ಪ್ರಸಂಗ ನೀವು ಬೋಧಿಸುವಾಗ ಜನರು ಓನು ಮಾಡಬೇಕೆಂದು ಹೇಳುವದು ಅವಶ್ಯ ಇರುವಾಗ ಅವರ ಒಳ್ಳೆಯ ತನದ ಮೇಲೆ ಭರವಸೆಯನ್ನಿಡುವದಕ್ಕಿಂತ ಯೇಸುವಿನ ತ್ಯಾಗದ ಮೇಲೆ ಭರವಸೆ ಇಡಬೇಕೆಂದು ಹೇಳಿರಿ ಮತ್ತು ಆತನ ಕಡೆ ಪ್ರೀತಿಯಿಂದ ತಿರುಗಿಕೊಂಡು ವಿಧೇಯತೆಯುಳ್ಳವರಾಗಿರಿ (ಮಾರ್ಕ 16:15, 16; ಅಪೊಸ್ತಲರ ಕೃತ್ಯಗಳು 2:38). ಅಪನಂಬಿಗಸ್ತ ಕ್ರೈಸ್ತರು ಪುನಃ ಆತನ ಕಡೆ ತಿರುಗುವದು ಅವಶ್ಯವಾಗಿದೆ ಇನ್ನು ಅವರಿಗೆ ಅವಕಾಶವಿದೆ (ಅಪೊಸ್ತಲರ ಕೃತ್ಯಗಳು 8:22; ಯಾಕೋಬ 5:16).

## ಗಮನಿಸಿ

ನಾನು ಪ್ರವಚನ ಪೀಠಕ್ಕೆ ಪ್ರಥಮ ಬಾರಿಗೆ ಹೊದಂದಿನಿಂದ ಇಲ್ಲಿಯವರೆಗೆ ಎರಡನೇಯ ಬರೋಣದ ಕುರಿತು ಬೋಧಿಸಿದ್ದೇನೆ. ಈ ಸಾರಾಂಶದ ಕುರಿತು ಬೋಧಿಸಿದ ಮತ್ತು ಬರೆದಿರುವ ಎಲ್ಲರಿಗೆ ನಾನು ಋಣಿಯಾಗಿದ್ದೇನೆ. "ರಾಜನು ಬರುತ್ತಿದ್ದಾನೆ!" ಎನ್ನುವ ಪ್ರಸಂಗಕ್ಕಾಗಿ ಅನೇಕ ಬೇರೆ ಬೇರೆ ವಿಷಯಗಳನ್ನು ಉಪಯೋಗಿಸಿದೆ ಆದರೆ ಸಾಮಾನ್ಯ ಪ್ರೋತ್ಸಾಹ ಮತ್ತು ಇದರ ತಲೆ ಬರಹವನ್ನು ಈ ಲೇಖಕರಿಂದ ತೆಗೆದುಕೊಳ್ಳಲಾಗಿದೆ Landon B. Saunders in *Abilene Christian University Lectures* (1980), 103–15.

ಎರಡನೆಯ ಬರೋಣದ ಕುರಿತು ಎಷ್ಟು ಬೋಧನೆ ಮಾಡಬೇಕಾಗಿತ್ತೋ ಅಷ್ಟು ಮಾಡುತ್ತಿಲ್ಲ ಬಹಳಷ್ಟು ಸಂಗೀತಗಳು ಈ ವಿಷಯದ ಮೇಲೆ ಇವೆ. ಈ ಅಂಶ ಒಳಗೊಂಡಿರುವ ಹಾಡುಗಳನ್ನು ಹಾಡಲು ಹಾಡುಗಾರ ನಾಯಕನಿಗೆ ನೀವು ಕೇಳಬಹುದು.